# ಹೊಸತು




## ಹೊಸ ಒಲಿಂಪಸ್ ಕ್ಯಾಮೆರಾ

ಒಲಿಂಪಸ್ ಇಮೇಜ್ ಇಂಡಿಯಾ ಪ್ರೈ.ಲಿ. ಕಂಪೆನಿ ಇದೀಗ ಹೊಸ ಮಾದರಿಯ ಮಿರರ್ ಲೆಸ್ ಕ್ಯಾಮೆರಾ 'ಒಲಿಂಪಸ್ ಒ ಎಂ ಡಿಇ–ಎಂ10 ಅನ್ನು ಬಿಡುಗಡೆ ಮಾಡಿದೆ. ಇದರಲ್ಲಿನ ಸೂಪರ್ ಜೂಮ್ ಅತ್ಯುತ್ತಮ ಗುಣಮಟ್ಟದ ಚಿತ್ರಗಳನ್ನು ಸೆರೆಹಿಡಿಯಲು ಸಹಕಾರಿಯಾಗಿದೆ. ಇದು ಕಟಿಂಗ್ ಎಡ್ಜ್ ತಂತ್ರಜ್ಞಾನದಿಂದ ಕೂಡಿದ್ದು ಕ್ಯಾಮೆರಾ ಬಹಳ ಹಗುರವಾಗಿದೆ. ಬೆಲೆ 53,990 ರೂಪಾಯಿ.
ಮಾಹಿತಿಗೆ: 99300 58087

## ನಿವಿಯ ಶವರ್ ಕಂಡಿಷನರ್

ಸೌಂದರ್ಯ ಸಾಧನಗಳಿಗೆ ಹೆಸರಾದ ನಿವಿಯ ಇದೀಗ ಶವರ್ ಸ್ಕಿನ್ ಕಂಡಿಷನರ್ ಒಂದನ್ನು ಮಾರುಕಟ್ಟೆಗೆ ತಂದಿದೆ. ತ್ವಚೆಯನ್ನು ನುಣುಪಾಗಿಸಿ ಹೊಳಪು ನೀಡಲು ಇದು ಸಹಕಾರಿ ಎಂದು ಕಂಪೆನಿ ಹೇಳಿದೆ. ಚರ್ಮ ಬಿರುಕು ಬಿಡುವುದು, ಒಡೆಯುವುದು, ಒರಟಾಗುವುದನ್ನು ಇದು ತಡೆಯುತ್ತದೆ.

ಬೆಲೆ 250 ರೂಪಾಯಿ.
ವಿವರಕ್ಕೆ: 9773699592




## ಟಾಟಾ ಸ್ವಚ್ ಜಲಶುದ್ಧೀಕರಣ ಸಾಧನ




ಟಾಟಾ ಕೆಮಿಕಲ್ಸ್ ಲಿ. ಕಂಪೆನಿ ಇದೀಗ ಅತ್ಯಾಧುನಿಕ ತಂತ್ರಜ್ಞಾನವನ್ನು ಒಳಗೊಂಡಿರುವ ನೀರಿನ ಶುದ್ಧೀಕರಣ ಸಾಧನ ಬಿಡುಗಡೆ ಮಾಡಿದೆ. ಸಿಲ್ವರ್ ನ್ಯಾನೊ ತಂತ್ರಜ್ಞಾನವನ್ನು ಆಧರಿಸಿದ 'ಟಾಟಾ ಸ್ವಚ್' ಈಗ 'ಪ್ಲಾಟಿನಾ' ಮತ್ತು 'ಅಲ್ಟಿಮಾ' ಎಂಬ ಎರಡು ಮಾದರಿಗಳಲ್ಲಿ ಲಭ್ಯ. ಹೊಸ ಜಲಶುದ್ಧೀಕರಣ ಯಂತ್ರಗಳು ಏಳು ಲೀಟರ್‌ಗಳಷ್ಟು ನೀರು ಸಂಗ್ರಹಿಸಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿವೆ. ರೋಗಾಣುಗಳಿಗೆ, ನೀರು ಕಲುಷಿತಗೊಳ್ಳಲು ಅವಕಾಶ ನೀಡದಂತಹ ವಿಶೇಷವಾದ ನೀರಿನ ಸಂಗ್ರಹ ಟ್ಯಾಂಕ್ ಇದರಲ್ಲಿದೆ.

ಪ್ರಮುಖ ವಾಣಿಜ್ಯ ಮಳಿಗೆಗಳಲ್ಲಿ ಲಭ್ಯ. ಪ್ಲಾಟಿನ ಸಿಲ್ವರ್ ಆರ್‌ಒ ಬೆಲೆ 13,999 ರೂಪಾಯಿ ಹಾಗೂ ಅಲ್ಟಿಮಾ ಸಿಲ್ವರ್ ಆರ್‌ಒ ಪ್ಲಸ್ ಬೆಲೆ 16,999 ರೂಪಾಯಿ.

ಮಾಹಿತಿಗೆ: 99000 42087

## ರೂಬಿನಟೊದಿಂದ ಕ್ಯಾಲಿಗ್ರಫಿ ಸೆಟ್

ಸುಂದರವಾದ ಲಿಪಿಯಿಂದ ಅಂದದ ಹಸ್ತಾಕ್ಷರ ಪಡೆಯಲು ಇಟಲಿ ಮೂಲದ ರೂಬಿನಟೊ ಕಂಪೆನಿ ಇದೀಗ ಹೊಸ ಬಗೆಯ ಕ್ಯಾಲಿಗ್ರಫಿ ಸೆಟ್ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಆಧುನಿಕ ಜಗತ್ತಿನಲ್ಲಿ ಕಂಪ್ಯೂಟರ್ ತಂತ್ರಜ್ಞಾನವೇ ಹೆಚ್ಚಾಗಿ ಬಳಕೆಯಲ್ಲಿದ್ದರೂ ಕೈಬರಹಕ್ಕೂ ಅಷ್ಟೇ ಮಹತ್ವವಿರುವುದರಿಂದ ಈ ಕಿಟ್ ಪ್ರಯೋಜನಕಾರಿಯಾಗಬಹುದು ಎಂಬುದು ಕಂಪೆನಿ ವಿಶ್ವಾಸ. ಈ ಕಿಟ್‌ನಲ್ಲಿ ಇಂಕ್, ನಿಬ್, ಡ್ರೈ ಸೇರಿದಂತೆ ಹೊಸ ಬಗೆಯ ಟೇಬಲ್ ಐಟಂಗಳಿವೆ.

ಬೆಲೆ 3,485 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ. ಮಾಹಿತಿಗೆ: 99728 75644

